ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಸನ್ಮಾನ್ಯ ಉಪಾಧ್ಯಕ್ಷಣೆಯವರೇ, ಗುಲ್ಬರ್ಗಾ, ಬೀದರ್, ರಾಯಚೂರು, ಜಿಲ್ಲೆಗಳ ರಸ್ತೆಗಳನ್ನು ರಾಷ್ಟ್ರೀಕರಣಮಾಡಿ ಖಾಸಗೀಚಾಲಕರು ನಿರ್ವಾಹಕರು ಹಾಗೂ ಹೆಲ್ಪರುಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಒಂದು ಖಾಸಗೀ ಬಸ್ಸಿಗೆ 4.5 ರಂತೆ ನೇಮಕಾತಿ ಮಾಡಿಕೊಳ್ಳಲಾಗುತ್ತದೆಂದು ತಿಳಿಸಿ 4.5 ಎಂದರೆ 1119 ಒಟ್ಟುಕಾರ್ಮಿಕರು ಆದರಲ್ಲಿ ಇಲ್ಲಿವರೆಗೆ ಹೊಸ ಲೈಸೆನ್ಸ್, ಹಳೆ ಗುಲ್ಬರ್ಗಾ, ಬೀದರ್ ಹಾಗೂ ರಾಯಚೂರು ಜಿಲ್ಲೆಗಳ ಕಾರ್ಮಿಕರು ಉಳಿದಿದ್ದಾರೆ . ಈ ಜಿಲ್ಲೆಗಳ ಕಾರ್ಮಿಕರಾದ 133 ಕಾರ್ಮಿಕರನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ನೇಮಕಾತಿ ಮಾಡಿ ಅವರ ಜೀವನೋದ್ದಾರಕ್ಕೆ ಅವಕಾಶ ಮಾಡಿಕೊಂಡು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಸಚಿವರು): ಸಾರಿಗೆ ಸಚಿವರ ಪರವಾಗಿ, ಬೀದರ್, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ಮಾರ್ಗಗಳ ರಾಷ್ಟ್ರೀಕರಣದ ನಂತರ ಖಾಸಗೀ ವಾಹನಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಚಾಲಕ, ನಿರ್ವಾಹಕ ಮತ್ತು ಹೆಲ್ಪರ್-ಬಿ ಇವರುಗಳನ್ನು ಕ.ರಾ.ರ ಸಂಸ್ಥೆಯಲ್ಲಿ ಒಂದು ಖಾಸಗೀ 4.5ರಂತೆ ಒಟ್ಟು 1121ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಬೇಕಾಗಿರುತ್ತದೆ. ಅದರಲ್ಲಿ ಇಲ್ಲಿಯವರೆಗೆ 988 ಅರ್ಹರ್ಥಿಗಳನ್ನು ಚಾಲಕ, ನಿರ್ವಾಹರ, ಹೆಲ್ಪರ್, ಕಿರಿಯ ಸಹಾಯಕರ ಮತ್ತು ಮೇಲ್ವಿಚಾರಕರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗಿದೆ. ನೇಮಕಾತಿ ಮಾಡಿಕೊಳ್ಳಲಾಗಿರುವ ಚಾಲಕ ನಿರ್ವಾಹಕ ಅಭ್ಯರ್ಥಿಗಳು ನಿಗದಿತ ಹುದ್ದೆಗೆ ರಾಷ್ಟ್ರೀಕರಣದ ದಿನಾಂಕಕ್ಕೆ ಮೊದಲು ಪಡೆದಿದ್ದೇ ಪರವಾನಗಿ (ಲೈಸೆನ್ಸ್‌ನ್ನು ಅನುಕರಿಸಿ ನೇಮಕಾತಿ ಮಾಡಿಕೊಳ್ಳಲಾಗಿದೆ. ಉಳಿದ 133 ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳು ದೊರೆಯದಿದ್ದ ಕಾರಣ ಹಾಗೂ ಕೆಲವು ಅಭ್ಯರ್ಥಿಗಳು ರಾಷ್ಟ್ರೀಕರಣದ ನಂತರ ಪರವಾನಗಿ (ಲೈಸೆನ್ಸ್ ಪಡೆದಿರುವುದರಿಂದ, ಈ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಿರುವುದಿಲ್ಲ. ಒಂದು ಬಸ್ಸಿಗೆ 4.5 ಜನರಿಂದ -5 ಜನರಿಗೆ ಇತ್ತೀಚೆಗೆ ಹೆಚ್ಚಿಸಲಾಗಿದೆ.

ಉಳಿದಿರುವ ಅಭ್ಯರ್ಥಿಗಳ ಅರ್ಜಿಗಳನ್ನು ಪರಿಶೀಲಿಸಿ, ಅವರಲ್ಲಿ ಸೂಕ್ತವಾದವರನ್ನು ಮೇಲೆ ಹೇಳಿದ ಅನುಪಾತದಂತೆ ವಿವಿಧ ವರ್ಗಗಳಲ್ಲಿ ತುಂಬಲಾಗುವುದು.

9. ಸಂಕೇಶ್ವರ ಕ್ಷೇತ್ರದ ಕಮತನೂರನಾಲಾ ಕೆರೆ ಕೆಲಸದ ಪ್ರಾರಂಭಕ್ಕೆ ಒತ್ತಾಯ

ಶ್ರೀ ಬಿ.ಎಂ. ಇದಿನಬ್ಬ (ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್‌ರ ಪರವಾನಗಿ): ಸನ್ಮಾನ್ಯ ಉಪಾಧ್ಯಕ್ಷಣೆಯವರೇ, ಸಂಕೇಶ್ವರ ಮತಕ್ಷೇತ್ರ ಕರ್ಪೂರ ಹಳ್ಳದ (ಕಮತನೂರನಾಲಾ) ಕೆರೆಯನ್ನು ಕಟ್ಟಬೇಕಾಗಿರುವ ಕೆರೆಯ ಕೆಲಸವನ್ನು ಕರ್ನಾಟಕ ಸ್ಟೇಟ್ ಕನಸ್ಟ್ರಕ್ಷನ್ ಕಾರ್ಪೊರೇಷನ್ ಸಂಸ್ಥೆಗೆ ವಹಿಸಿಕೊಡಲಾಗಿದೆ. ಆದರೆ, ಇಲ್ಲಿಯವರೆಗೆ ಭೂಸ್ವಾಧೀನ ಹಾಗೂ ಇನ್ನುಳಿದ ಕೆಲಸಗಳಲ್ಲಿ ಪ್ರಗತಿಯಾಗಿಲ್ಲ. ಬಹುಕಾಲದ ಬೇಡಿಕೆಯಾಗಿರುವ ಈ ಯೋಜನೆಗೆ ಈ ವರ್ಷದಲ್ಲಿ 50 ಲಕ್ಷ ರೂಪಾಯಿಗಳ ಅನುದಾನ ನಿಗದಿ ಮಾಡಿದ್ದು, ಇದರಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ? ಭೂ ಸ್ವಾಧೀನತೆಗಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ? ಇಂತಹ ಒಂದುಕೆರೆಯ ಕೆಲಸವನ್ನು ಟೆಕ್ನಿಕಲ್ ಕಮಿಟಿಗೆ ಮಂಜೂರಾತಿಗಾಗಿ ಕಳುಹಿಸಿಕೊಟ್ಟಿದ್ದಕ್ಕೆ ಕಾರಣವೇನು? ಇದರ ಬಗ್ಗೆ ಕೂಡಲೇ ಕರ್ನಾಟಕ ಸ್ಟೇಟ್ ಕನಸ್ಟ್ರಕ್ಷನ್ ಕಾರ್ಪೊರೇಷನ್ ಸಂಸ್ಥೆಗೆ ಆದೇಶ ನೀಡಿ ಕೆಲಸ ಪ್ರಾರಂಭ ಮಾಡಲು

ಸರ್ಕಾರದ ಗಮನ ಸೆಳೆಯುತ್ತಾ ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳಿಂದ ಸದನದಲ್ಲಿ ಉತ್ತರವನ್ನು ಬಯಸುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ. ಬೆಳಗಾಂ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಕಾಮತ್‌ನೋರು ಬಳಿ ಸಣ್ಣ ನೀರಾವರಿ ಕೆರೆ ಕಟ್ಟುವ ಕಾಮಗಾರಿ 1992-93ನೇ ಸಾಲಿನ ಆಯವ್ಯಯದಲ್ಲಿ 60 ಲಕ್ಷ ರೂಪಾಯಿಗಳ ಅಂದಾಜಿನೊಂದಿಗೆ ಸೇರಿದೆ. ಈ ಕಾಮಗಾರಿಯ 196.55 ಲಕ್ಷ ರೂಪಾಯಿಗಳ ವಿವರವಾದ ಅಂದಾಜು ಪಟ್ಟಿಗೆ ಸರ್ಕಾರಿ ಆದೇಶ ಸಂಖ್ಯೆ ನೀಇ 89 ಸನಬಿ 78 ದಿನಾಂಕ 21-10-92ರಂದು ಈ ಕೆಳಕಂಡ ಕೆಲಸಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿತ್ತು.

1) ಮುಖ್ಯ ಅಭಿಯಂತರರು, ಸಣ್ಣ ನೀರಾವರಿ ಬೆಂಗಳೂರು ಇವರು ಸದರಿ ಡಿವಿಜನ್‌ಗೆ ತಾಂತ್ರಿಕ ಮಂಜೂರಾತಿ ನೀಡುವ ಮೊದಲು ತಾಂತ್ರಿಕ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯುವುದು.

2) ನಿವೇದನೆಗೆ ತಾಂತ್ರಿಕ ಸಮಿತಿಯ ಅನುಮೋದನೆ ಪಡೆದ ನಂತರ ಕಾಮಗಾರಿಗಳನ್ನು ಕೈಗೊಳ್ಳುವ ಆಯಾ ವರ್ಷಗಳ ದರ ಪಟ್ಟಿಯ ದರದಂತೆ ಹಾಗೂ ಶೇಕಡ 10ರಂತೆ ಹೆಚ್ಚುವರಿ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ಇವರಿಗೆ ವಹಿಸತಕ್ಕದ್ದು. ಈ ಕೆರೆ ಕಾಮಗಾರಿಕೆಗೆ ಬೇಕಾಗಿರುವ ಭೂಸ್ವಾಧೀನಕ್ಕಾಗಿ ಈಗಾಗಲೇ 23.27 ಲಕ್ಷ ರೂಪಾಯಿಗಳನ್ನು ಕಂದಾಯ ಇಲಾಖೆಗೆ ಪಾವತಿ ಮಾಡಲಾಗಿದೆ. ಆದರೆ ಈ ಕೆರೆಯ ಅಂದಾಜು ಮೊತ್ತ 100 ಲಕ್ಷ ರೂಪಾಯಿಗಳು ಮೀರಿರುವುದರಿಂದ ನಿಯಮಾವಳಿ ಪ್ರಕಾರ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆಯಬೇಕಿತ್ತು. ಈ ಕಾರಣ ಈ ಅಂದಾಜು ಪಟ್ಟಿಯನ್ನು ದಿನಾಂಕ 21-12-92ರಂದು ನಡೆದ ಕೃಷ್ಣಾ ಗೋದಾವರಿ ಜಲಾಯನ ಯೋಜನೆಗಳ ತಾಂತ್ರಿಕ ಸಮಿತಿಯಲ್ಲಿ ಮಂಡಿಸಲ್ಪಟ್ಟಿದ್ದು ಸಮಿತಿಯು ಪ್ರಸ್ತಾವನೆಯನ್ನು ಜಲ ವಿಜ್ಞಾನ ಜಲ ಸಂಪರ್ಕ ಅಭಿವೃದ್ಧಿ ಸಂಸ್ಥೆ ಬೆಂಗಳೂರು ಇವರಿಂದ ಧೃಢೀಕರಿಸಿಕೊಡಬೇಕೆಂದು ತೀರ್ಮಾನಿಸಿದ್ದು ಅದರಂತೆ ಸಂಬಂಧಪಟ್ಟ ಮುಖ್ಯ ಅಭಿಯಂತರಿಗೆ ಆದೇಶ ನೀಡಲಾಗಿದೆ. ಈ ಬಗ್ಗೆ ಕ್ರಮ ಕೈಗೊಂಡು ಮುಂದಿನ ತಾಂತ್ರಿಕ ಸಮಿತಿಯ ಸಭೆಯಲ್ಲಿ ಪರಿಶೀಲಿಸಿ ಸರ್ಕಾರದ ಆದೇಶದಲ್ಲಿ ಸೂಚಿಸಿರುವಂತೆ ಷರತ್ತಿನ ಮೇರೆಗೆ ಕ್ರಮ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ಇತ್ತೀಚೆಗೆ ಉಂಟಾದ ಮಳೆ ಹಾಗೂ ನೆರೆ ಹಾವಳಿ ಬಗ್ಗೆ ಚರ್ಚೆ

ಛೇರ್ಮನ್ : ಇತ್ತೀಚೆಗೆ ರಾಜ್ಯದಲ್ಲಿ ಉಂಟಾದ ಮಳೆ ಹಾಗೂ ನೆರೆ ಹಾವಳಿಯ ಬಗ್ಗೆ ಚರ್ಚೆಯನ್ನು ಪ್ರಾರಂಭಿಸಬಹುದು.

ಶ್ರೀ ಹೆಚ್ ವಿಕಾಂತಯ್ಯ : ಮಾನ್ಯ ಅಧ್ಯಕ್ಷಿಣಿಯವರೆ, ಇವತ್ತು ಶುಕ್ರವಾರವಾದ್ದರಿಂದ ನಾನು ತಮ್ಮ ಅನುಮೋದನೆಯನ್ನು ಕೋರಿ ಒಂದು ಪ್ರಸ್ತಾವನೆಯನ್ನು ಹೇಳುವುದಕ್ಕೆ....

ಛೇರ್ಮನ್ : ಶೂನ್ಯ ವೇಳೆ ಮುಗಿದು ಹೋಗಿದೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ